ಅನಾವರಣವಾಗುತ್ತದೆ. ಜಗತ್ತಿನಲ್ಲಿ ಯಾವಾಗಲೂ ಋಣಾತ್ಮಕ ಶಕ್ತಿಯು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇದು ಎಲ್ಲ ಕಾಲ, ಯುಗ, ಮನ್ವಂತರಗಳಲ್ಲಿಯೂ ಕಾಣುವಂಥದ್ದೇ ಆಗಿದೆ. ಒಬ್ಬ ವ್ಯಕ್ತಿಯು ಕಲಾತ್ಮಕ ಪ್ರದರ್ಶನವೊಂದನ್ನು ನೋಡುತ್ತ ತನ್ನ ದೈನಂದಿನ ಜಂಜಾಟಗಳನ್ನು ಮರೆತು ಅದರಲ್ಲಿ ತಲ್ಲೀನನಾಗುತ್ತಾನೆ ಎಂದಾದರೆ ಆಗ ಆತನ ಆಲೋಚನೆಗಳು ಉನ್ನತಿಯತ್ತ ಚಲಿಸುತ್ತಿರಬೇಕು, ಅನೈಚ್ಛಿಕವಾಗಿ ಅವನ ಕಣ್ಣಲ್ಲಿ ಎರಡು ಹನಿಗಳು ಉದುರುವಾಗ, ಅವನ ಮನಸ್ಸು ಪರಿಶುದ್ಧಗೊಳ್ಳುತ್ತಿರಬೇಕು. ಅದೇ ಕಲೆಯ ನಿಜವಾದ ಉದ್ದೇಶ. ಮನರಂಜನೆಯ ಮೂಲಕ ಶಿಕ್ಷಣ ನೀಡುವುದು ಹಾಗೂ ಜ್ಞಾನೋದಯವಾಗುವಂತೆ ಮಾಡುವುದು. ಈ ಪಯಣವನ್ನೇ ಅಧ್ಯಾತ್ಮ ಎನ್ನುವುದಾದರೆ ಹೌದು. ನನಗೆ ಇದು ಇಷ್ಟ.

**◆ ನೀವು ಒಡಿಸ್ಸಿ ಮತ್ತು ಭರತನಾಟ್ಯ ಎರಡೂ ಕ್ಷೇತ್ರದಲ್ಲಿ ಸಾಧನೆ ಮಾಡಿದವರು. ಇವೆರಡು ನೃತ್ಯಪ್ರಕಾರಗಳು ಒಂದಕ್ಕೊಂದು ಪೂರಕವೇ?**

ಕಲಾ ಅಭ್ಯಾಸಿಗಳು ಶಾಸ್ತ್ರೀಯ ನೃತ್ಯಪ್ರಕಾರಗಳಲ್ಲಿ ಒಂದನ್ನು ಮಾತ್ರ ಅಯ್ಕೆ ಮಾಡಿಕೊಳ್ಳಬೇಕೆಂದೇನೂ ಇಲ್ಲ. ಆದರೆ ಒಂದಕ್ಕೊಂದು ಪೂರಕವಾಗಿರುವ ಪ್ರಕಾರಗಳನ್ನು ಆಯ್ಕೆ ಮಾಡಿಕೊಳ್ಳುವುದು ಒಳ್ಳೆಯದು. ನಾನು ಕಲಿತಿರುವ ಒಡಿಸ್ಸಿ ಮತ್ತು ಭರತನಾಟ್ಯ ನೃತ್ಯಗಳಲ್ಲಿ ಹಲವು ಸಾಮ್ಯತೆಗಳಿವೆ. ಈ ಎರಡೂ ಪ್ರಕಾರಗಳು ಅಕ್ಕತಂಗಿಯರಿದ್ದಂತೆ, ಪರಸ್ಪರ ಪೂರಕವಾಗಿ ಗೋಚರಿಸುತ್ತವೆ. ಇವೆರಡೂ ದೇವಾಸ್ಥಾನದ ನೃತ್ಯಗಳಾಗಿದ್ದವು, ಒಂದೇ ಮಾದರಿಯ ಇತಿಹಾಸವನ್ನೂ ಹೊಂದಿವೆ. ಆದರೆ ಕಥಕಳಿ ಮತ್ತು ಕಥಕ್ ಹಾಗಲ್ಲ. ಅವುಗಳ ಹಿನ್ನೆಲೆಯೇ ಬೇರೆ ತೆರನಾದುದು. ಮಣಿಪುರಿಯು ಇನ್ನೂ ವಿಭಿನ್ನವಾಗಿದೆ. ಅಲ್ಲಿ ಬಳಸುವ ಸಂಗೀತವು ಭಿನ್ನವಾಗಿರುತ್ತದೆ. ಕಥಕಳಿಗೆ ಮಲಯಾಳಂ ಭಾಷೆ ಅನಿವಾರ್ಯ. ಮಣಿಪುರಿಗೆ ಮಂಗೋಲಿಯ ಪ್ರಭಾವಿತ ಮಣಿಪುರಿ ಭಾಷೆಯ ಅಗತ್ಯವಿದೆ. ಜೊತೆಗೆ ಆಯಾ ನೃತ್ಯದ ಜೊತೆಗೆ ನಂಬಿಕೆಗಳೂ ಸೇರಿಕೊಂಡಿರುತ್ತವೆ. ಅಂದರೆ ನಾವು ಆರಾಧಿಸುವ ದೇವಿ, ಕೃಷ್ಣ, ಗಣೇಶನ ಕಥೆಗಳು ಮತ್ತು ಮಣಿಪುರದವರು ಆರಾಧಿಸುವ ದೇವರ ರೂಪಗಳು ಭಿನ್ನವಾಗಿವೆ. ಅವರ ಉಚ್ಚಾರಣೆಗಳೂ ವಿಭಿನ್ನವಾಗಿವೆ. ಆದ್ದರಿಂದ ಕಲಿಕೆಗಾಗಿ ನೃತ್ಯವನ್ನು ಆಯ್ಕೆ ಮಾಡುವಾಗ ತುಸು ಯೋಚಿಸಿ ಆಯ್ಕೆ ಮಾಡಿಕೊಳ್ಳುವುದುಉತ್ತಮ.

**◆ ಮುದ್ರೆಗಳು, ತ್ರಿಭಂಗ ಮುಂತಾಗಿ ಒಡಿಸ್ಸಿ ನೃತ್ಯಕ್ಕೆ ಪೂರಕವಾಗಿ ದೇಹದ ಸಮತೋಲನವನ್ನು ಕಾಪಾಡಿಕೊಳ್ಳುವುದು ಕಲಾವಿದರ ಜವಾಬ್ದಾರಿ.**



**ಈ ನಿಟ್ಟಿನಲ್ಲಿ ಹೊಸತಲೆಮಾರಿನ ಪ್ರಯತ್ನಗಳು ಮತ್ತು ಹಿರಿಯ ತಲೆಮಾರಿನ ಪ್ರಯತ್ನಗಳು ಭಿನ್ನವಾಗಿವೆಯೇ?**

ಆಯಾ ಕಾಲಕ್ಕೆ ತಕ್ಕಂತೆ ಅಭ್ಯಾಸ ಕ್ರಮಗಳಲ್ಲಿ ಸಣ್ಣಪುಟ್ಟ ಬದಲಾವಣೆಗಳಿರಬಹುದು. ಆದರೆ ಅದಕ್ಕಾಗಿ ಶ್ರಮ ಹಾಕುವುದು ಅಗತ್ಯವೇ ಆಗಿದೆ. ಪಾಶ್ಚಾತ್ಯರಲ್ಲಿ ನೃತ್ಯದ ಪರಿಕಲ್ಪನೆ ನಮ್ಮ ದೇಶದಲ್ಲಿ